**ಸಾಕ್ಷಿಯನ್ನು ದಿನಾಂಕಃ 12.01.2023 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ. ಟಿ.ಆರ್.ಎಂ. ವಕೀಲರಿಂದಃ**

ನನ್ನ ತಂದೆ ಮತ್ತು ನನ್ನ ಕುಟುಂಬದವರು 2005 ರಲ್ಲಿ 1 ನೇ ಪ್ರತಿವಾದಿಗೆ 01 ಎಕರೆ ಜಮೀನನ್ನು ಮಾರಾಟ ಮಾಡಿದ್ದೆವು ಎಂದರೆ ಸರಿ. ಕ್ರಯ ಪತ್ರದಲ್ಲಿ 29 ಗುಂಟೆ ಮತ್ತು 11 ಗುಂಟೆಗೆ ಒಂದೇ ಚೆಕ್ ಬಂದಿಯನ್ನು ನಮೂದಿಸಿ ಮಾರಾಟ ಮಾಡಿರುತ್ತೇವೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು ಸ್ವತಃ ಮುಂದುವರೆದು ಸ.ನಂ. 66/10 ರಲ್ಲಿ 29 ಗುಂಟೆ ಮತ್ತು ಸ.ನಂ. 66/13 ರಲ್ಲಿ 11 ಗುಂಟೆ ಮಾರಾಟ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ಕ್ರಯ ಪತ್ರದಲ್ಲಿ ನಮೂದಿಸಿರುವಂತೆ ಪೂರ್ವಕ್ಕೆ ದೊಡ್ಡಮಲ್ಲಮ್ಮ ಕೋಂ ಈರೇಗೌಡರ ಜಮೀನು, ಪಶ್ಚಿಮಕ್ಕೆ ನಮ್ಮ ಬಾಬ್ತು ಬೇರೆ ಸ.ನಂ. ಜಮೀನು, ಉತ್ತರಕ್ಕೆ ಸರ್ಕಾರಿ ಓಣಿ ಮತ್ತು ದಕ್ಷಿಣಕ್ಕೆ ಕಾಳಮ್ಮ ಕೋಂ ಸಿದ್ದೇಗೌಡರ ಜಮೀನು ಎಂದು ನಮೂದಿಸಿರುತ್ತಾರೆ ಎಂದರೆ ಸರಿ ಆದರೆ ದಕ್ಷಿಣಕ್ಕೆ ನಮ್ಮದೇ ಜಮೀನು ಇರುತ್ತದೆ. ನನ್ನ ತಂದೆ 2018 ರ ಪೂರ್ವದಲ್ಲಿಯೇ ಮೃತಪಟ್ಟಿದ್ದರು ಎಂದರೆ ಸರಿ. ನನ್ನ ತಂದೆ ಮೃತಪಟ್ಟ ನಂತರ ನಮ್ಮ ಹೆಸರಿಗೆ ಖಾತೆ ಮಾಡಿಸಿಕೊಳ್ಳಲು ಭೂ ಮಾಪಕರನ್ನು ಕರೆಸಿ ಜಮೀನನ್ನು ಅಳತೆ ಮಾಡಿಸಿರುತ್ತೇವೆ ಎಂದರೆ ಸರಿ. ಆ ಸಂದರ್ಭದಲ್ಲಿ 1 ನೇ ಪ್ರತಿವಾದಿಗೆ ಮಾರಾಟ ಮಾಡಿದ ಜಮೀನು ಸ.ನಂ. 66/12 ಎಂದು ನಮ್ಮ ಗಮನಕ್ಕೆ ಬಂದಿರುತ್ತದೆ ಎಂದರೆ ಸರಿಯಲ್ಲ. ಶಿವಣ್ಣೇಗೌಡ ನನ್ನ ಸಂಬಂಧಿಕರು ಎಂದರೆ ಅವರು ನನ್ನ ಚಿಕ್ಕಪ್ಪನ ಮಗ. ಸ.ನಂ. 66/12 ರ ಚೆಕ್ ಬಂದಿಯನ್ನು ವಿರೂಪಗೊಳಿಸುವುದಕ್ಕಾಗಿ ನಾವೇ ಶಿವಣ್ಣೇಗೌಡರ ಮುಖಾಂತರ ಒ.ಎಸ್. 376/2018 ರಂತೆ ಒಂದು ದಾವೆ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಪ್ರಕರಣ 02 ಗುಂಟೆಯನ್ನು ಶಿವಣ್ಣೇಗೌಡರಿಗೆ ದಾರಿಗೆಂದು ಬಿಟ್ಟು ರಾಜಿ ಮಾಡಿಕೊಂಡಿರುತ್ತೇವೆ ಎಂದರೆ ಸರಿ. 1 ನೇ ಪ್ರತಿವಾದಿ ಸ.ನಂ. 66/12 ಎಂಬುದರ

ಬದಲು ಸ.ನಂ. 66/10 ಎಂದು ನಮೂದಾಗಿರುತ್ತದೆ ಎಂದು ಅದರ ತಿದ್ದುಪಡಿಗಾಗಿ ಒ.ಎಸ್. 403/2018 ರಂತೆ ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ನಾವು ಹಾಜರಾಗಿ ತಕರಾರು ಸಲ್ಲಿಸಿರುತ್ತೇವೆ ಎಂದರೆ ಸರಿ. ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಮೇಲ್ಮನವಿ ಬಾಕಿ ಇರುವ ಸಮಯದಲ್ಲಿ ನಾನು ನನ್ನ ಮಗನಿಗೆ ದಿನಾಂಕಃ 07.10.2020 ರಂದು ದಾನಪತ್ರ ಬರೆದಿರುತ್ತೇನೆ ಎಂದರೆ ಸರಿ. ಸದರಿ ದಾನಪತ್ರದ ಪ್ರಕಾರ ಪಹಣಿ ಪತ್ರಿಕೆಯಲ್ಲಿ ನನ್ನ ಮಗನ ಹೆಸರು ದಾಖಲಾಗಿರುತ್ತದೆ ಎಂದರೆ ಸರಿ.

**ಈ ಹಂತದಲ್ಲಿ ಮಾನ್ಯ ಪ್ರತಿವಾದಿಗಳ ಪರ ವಕೀಲರು ಮುಂದಿನ ಪಾಟೀ ಸವಾಲಿಗಾಗಿ ಸಮಯ ಕೋರಿರುತ್ತಾರೆ. ಸಮಯ ನೀಡಲಾಯಿತು.**

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸಾ ಸ ಇ ಒ.,**

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**